ಅ) ಬೆಂಗಳೂರು ನಗರದಲ್ಲಿ ಮೂಲಭೂತ ಸೌಕರ್ಯ ಸೆಸ್ ಯಾವ ವರ್ಷದಿಂದ ಯಾವ ವರ್ಷದವರೆಗೆ ಸಂಗ್ರಹಿಸಲಾಗಿದೆ;

ಆ) ಈ ಸೆಸ್‌ನಿಂದ ಸಂಗ್ರಹವಾದ ಒಟ್ಟು ಹಣವೆಷ್ಟು;

ಇ) ಈ ಮೂಲಭೂತ ಸೆಸ್ ಹಣವನ್ನು ಯಾವ ಯಾವ ಕಾರ್ಯಕ್ರಮಗಳಿಗೆ ವಿನಿಯೋಜಿಸಲಾಗಿದೆ?

ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿ)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಯಾವುದೇ ಮೂಲಭೂತ ಸೌಕರ್ಯ ಸೆಸ್‌ನ್ನು ವಿಧಿಸುವ ಬಗ್ಗೆ ಪಾಲಿಕೆಯು ತೀರ್ಮಾನ ಕೈಗೊಂಡಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಖರ್ಚು ಮಾಡಿರುವ ಹಣ

389 (740) ಶ್ರೀ ಜಾರ್ಜ್ ಕೆ.ಜೆ. (ಸರ್ವಜ್ಞ ನಗರ) ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2007–08 ರಿಂದ 2010–11ನೇ ಸಾಲಿನವರೆಗೆ ಸರ್ಕಾರ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಖರ್ಚು ಮಾಡಿರುವ ಹಣದ ಮೊತ್ತವೆಷ್ಟು;

ಆ) ಈ ಅವಧಿಯಲ್ಲಿ ಸರ್ಕಾರಿ ನೌಕರರ ವೇತನಕ್ಕಾಗಿ ಹಾಗೂ ಇತರ ಯೋಜನೇತರ ಬಾಬ್ತುಗಳಿಗಾಗಿ ಖರ್ಚು ಮಾಡಿರುವ ಮೊತ್ತವೆಷ್ಟು?

ಡಾ: ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಮುಜರಾಯಿ ಸಚಿವರು)

ಅ) 2007–08 ರಿಂದ 2010–11ನೇ ಸಾಲಿನವರೆಗೆ ಸರ್ಕಾರವು ಯೋಜನಾ ಬಾಬ್ತಿನಡಿಯಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಖರ್ಚು ಮಾಡಿರುವ ಹಣದ ಮೊತ್ತ ಕೆಳಕಂಡಂತಿರುತ್ತದೆ:

(ರೂ. ಕೋಟಿಗಳಲ್ಲಿ)

ವರ್ಷ	ಖರ್ಚು
2007–08	17226.91
2008–09	22576.74
2009–10	26944.10
2010–11 (ಜನವರಿ 2011ರ ಅಂತ್ಯದವರೆಗೆ)	22687.41

ಆ) 2007–08 ರಿಂದ 2010–11ರ ಅವಧಿಯಲ್ಲಿ ಸರ್ಕಾರಿ ನೌಕರರ ವೇತನ ಹಾಗೂ ಇತರ ಯೋಜನೇತರ ಬಾಬ್ತುಗಳಿಗಾಗಿ ಖರ್ಚು ಮಾಡಿರುವ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

2007–08 ರಿಂದ 2010–11ರ ಅವಧಿಯಲ್ಲಿ ಸರ್ಕಾರಿ ನೌಕರರ ವೇತನ ಹಾಗೂ ಇತರೆ ಯೋಜನೇತರ ಬಾಬ್ತುಗಳಿಗಾಗಿ ಖರ್ಚು ಮಾಡಿರುವ ವಿವರ

(ಕೋಟಿ ರೂ.ಗಳಲ್ಲಿ)

ವಿವರ	2007–08	2008–09	2009–10	2010–11
1 ವೇತನ	8397.28	9929.77	10296.00	12139.00
2 ಇತರ ಪ್ರಮುಖ ಬಾಬ್ತುಗಳು				
ಅ) ಬಡ್ಡಿ ಸಂದಾಯ	4505.78	4532.03	5213.00	5542.37
ಆ) ಪಿಂಚಣಿ	3240.58	4112.63	3408.32	4297.02
ಇ) ಸಹಾಯ ಧನ	4662.59	2934.75	3688.74	5053.94
ಈ) ಆಡಳಿತಾತ್ಮಕ ವೆಚ್ಚ	692.00	748.00	892.00	1008.00
ಉ) ಸಹಾಯಾನುದಾನ	1053.00	1164.00	1477.00	1668.00